ಅಷ್ಟೇ ಆಗಿದ್ದರೆ ಕವಿತೆಯ ಪ್ರಾರಂಭದಲ್ಲಿ ಬರುವ ಕಾಳಿಂಗನೆಂಬ ಗೊಲ್ಲ, ಅವನ ನೂರಾರು ಹಸುಗಳು, ಬೆಟ್ಟ, ಕಾಡು, ಮಾವಿನ ಮರ ಮುಂತಾದವುಗಳಿಂದ ಕೂಡಿದ ಪ್ರಕೃತಿ ಇವೆಲ್ಲ ಅನವಶ್ಯಕವಾದುದೆಂದು ಅನಿಸುತ್ತದೆ. ಕಥೆಗೆ ವಾಸ್ತವಿಕ ಸತ್ವೆ ಇರಬೇಕೆಂದು ಈ ಹಿನ್ನೆಲೆ ಇದೆಯೆಂದರೂ ಪುಣ್ಯಕೋಟಿ ಮತ್ತು ಹುಲಿ ಈ ಪಾತ್ರಗಳ ಮಾನವೀಯ ನಡವಳಿಕೆ, ಪಾತ್ರಗಳ ಪೂರ್ಣ ಬೆಳವಣಿಗೆ ಇವೂ ಬೇಕಾಗಿರಲಿಲ್ಲವೆಂದು ಅನಿಸುತ್ತದೆ. ಇಂಥ ಹಿನ್ನೆಲೆಯಲ್ಲಿ ಇಷ್ಟು ಕುತೂಹಲ ಕೆರಳಿಸುವ ಈ ಪಾತ್ರಗಳ ವ್ಯಕ್ತಿತ್ವ ಹಾಗೂ ನಡವಳಿಕೆಯನ್ನು ನೋಡಿದಾಗ ಈ ಕವಿತೆ ಹೆಚ್ಚಿನದೇನನ್ನೋ ಹೇಳಬಯಸುತ್ತದೆ ಎಂದು ಅನಿಸದಿರದು. ಯಾಕೆಂದರೆ ಈ ಕವಿತೆ ಪ್ರತಿಷ್ಠಾಪಿಸುವುದು ಮಾನವೀಯ ಮೌಲ್ಯಗಳ ಪ್ರಪಂಚವನ್ನು.

ಹಾಗೆ ನೋಡಿದರೆ ಪ್ರಾಣಿಗಳೆಲ್ಲ ಮನುಷ್ಯನಿಂದ ಭಿನ್ನವಾದ ಪ್ರಕೃತಿಯ ಅಂಗವಾಗಿಯೇ ಬದುಕುವಂಥವುಗಳು. ಹುಟ್ಟಿನಿಂದ ಸಾವಿನವರೆಗೆ ಒಂದೇ ರೀತಿಯ ಸ್ವಭಾವವನ್ನು ಪ್ರಕಟಿಸುತ್ತ ಜೀವನವನ್ನು ನಡೆಸುತ್ತವೆ. ಗೋವು ಸಾತ್ವಿಕ ಪ್ರಾಣಿ, ಹುಲಿ ದುಷ್ಟಪ್ರಾಣಿ ಎನ್ನುವುದು ಮನುಷ್ಯನ ಅಭಿಪ್ರಾಯವೇ ಹೊರತು ಪ್ರಾಣಿಜೀವನದ ಮೌಲ್ಯ ಮತ್ತು ಅಪಮೌಲ್ಯಗಳ ಸಂಕೇತವಲ್ಲ. ಆದರೆ ಕವಿತೆಯಲ್ಲಿ ಈ ಧ್ವನಿ ಇದ್ದು ಅದು ಕವಿತೆಯ ಮುಖ್ಯ ನೀತಿಯನ್ನು ಕಟ್ಟಿಕೊಳ್ಳುತ್ತದೆ. ಪುಣ್ಯಕೋಟಿ ಎಂಬ ಹೆಸರೂ ಕೂಡ ಮನುಷ್ಯನ ಪುರುಷಾರ್ಥಗಳನ್ನು ನೇರವಾಗಿಯೇ ಸೂಚಿಸುತ್ತದೆ. ಪುಣ್ಯಕೋಟಿ ಹುಲಿಗೆ ಮಾತು ಕೊಟ್ಟು ತಿರುಗಿ ಬಂದು ಉಳಿದ ಗೋವುಗಳೊಡನೆ ಸಂಭಾಷಿಸುವ ರೀತಿ ಸಂಪೂರ್ಣವಾಗಿ ಮಾನವೀಯವಾಗಿದೆ.

ಅಮ್ಮಗಳಿರಾ ಅಕ್ಕಗಳಿರಾ
ಎನ್ನ ತಾಯೊಡಹುಟ್ಟುಗಳಿರಾ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು

ಹುಟ್ಟಿ ಬೆಳೆದೊಡನೆ ಸಂಬಂಧವಿಲ್ಲದಂತೆ ಜೀವಿಸುವ ಪ್ರಾಣಿ ಇಲ್ಲಿ ಸಂಬಂಧಗಳನ್ನು ಕುರಿತು ಮಾತಾಡುತ್ತದೆ. ಅನಾಥಸ್ಥಿತಿಯ ಪ್ರಜ್ಞೆ ಕೂಡ ಮನುಷ್ಯನಿಗೆ ಸಂಬಂಧಿಸಿದ್ದೇ ಹೊರತು ಪ್ರಾಣಿಗಳಿಗಲ್ಲ.

## ಅರ್ಥವಿಸ್ತಾರ

ಇಂಥ ಮಾನವೀಯ ಪ್ರಸಂಗಗಳಿಂದ ಕವಿತೆ ಅರ್ಥವಿಸ್ತಾರವನ್ನು ಪಡೆಯುತ್ತ ಹೋಗುತ್ತದೆ. ಕಾಳಿಂಗನೆಂಬ ಗೊಲ್ಲನ ಪಾತ್ರ ಕೇವಲ ಒಂದು ಚಿತ್ರದಂತೆ ಕಂಡರೂ ಈ ದೃಷ್ಟಿಯಿಂದ ಮಹತ್ವದ್ದಾಗಿದೆ. ಕವಿತೆ ಹೇಳುವ ಕಥೆಯಲ್ಲಿ ಕಾಳಿಂಗ, 'ನದಿಯ ಸ್ನಾನವ ಮಾಡಿಕೊಂಡು, ಮುದದೆ ತಿಲಕವ ಹಣೆಯೊಳಿಟ್ಟು, ಚದುರಶಿಖೆಯನು ಹಾಕಿದ'. ಕೊಳಲೂದುತ್ತ ಗೋವುಗಳನ್ನು ಪ್ರೀತಿಯಿಂದ ಕರೆಯುವುದನ್ನು ಬಿಟ್ಟರೆ ಅವನು ಬೇರೆ ಏನನ್ನೂ ಮಾಡುವುದಿಲ್ಲ. ಆದರೆ ಅವನು ಕೃಷಿಪ್ರಧಾನವಾದ ಸಂಸ್ಕೃತಿಯ ಮೌಲ್ಯಗಳ ಪ್ರತೀಕವಾಗಿದ್ದಾನೆ. ಮನುಷ್ಯನಿಗೂ ಪ್ರಕೃತಿಗೂ ಸಹಜ ಸಂಬಂಧವಿದ್ದು ಒಳ್ಳೆಯತನ ಮತ್ತು ದುಷ್ಟತನಗಳು ಸಹಜ ಪ್ರವೃತ್ತಿಗಳಾಗಿವೆ. ಆದರೆ ಇದು ತೋರಿಕೆಯ ಮೇಲು ಮೈಯ ಪ್ರಪಂಚ. ಇದರ ಬುಡಕ್ಕೆ ಊಹೆಗೆ ಮೀರಿದ ಇನ್ನೊಂದು ಪ್ರಪಂಚವೂ ಇದೆ. 'ದುಷ್ಟ ವ್ಯಾಘ್ರನು ಹೊಂಚುತಿರುವನು ನಟ್ಟನಡುವಿರು ಕಂದನೆ' ಎಂಬ ಉಪದೇಶದ ವಾಚ್ಯಾರ್ಥಕ್ಕಿಂತ 'ಹೊಂಚುತಿರುವನು' ಎಂಬ ಕ್ರಿಯಾಪದ ಜೀವನದ ಸುತ್ತಮುತ್ತಲೂ ಹೊಂಚುತ್ತಿರುವ ಸಾವನ್ನು ನೆನಪಿಗೆ ತಂದುಕೊಡುತ್ತದೆ. ಪುಣ್ಯಕೋಟಿಗೆ ಸಾವಿನ ಮೋಹವಿಲ್ಲ, ಹೆದರಿಕೆಯೂ ಇಲ್ಲ.

ಖಂಡವಿದೆ ಕೋ ಮಾಂಸವಿದೆ ಕೋ
ಗುಂಡಿಗೆಯ ಬಿಸಿರಕ್ತವಿದೆ ಕೋ
ಚಂಡವ್ಯಾಘ್ರನೆ ನೀನಿದೆಲ್ಲವ–
ನುಂಡು ಸಂತಸದಿಂದಿರು.

ಇಲ್ಲಿಯೂ 'ಉಂಡು' ಎಂಬ ಕ್ರಿಯಾಪದವೇ ಧ್ವನಿಪೂರ್ಣವಾದದ್ದು. ಉಪನಿಷತ್ತಿನ ಮಾತಿನಲ್ಲಿ ಹೇಳುವುದಾದರೆ ಅನ್ನ ತನ್ನನ್ನು ತಾನೇ ಪ್ರಾಣಕ್ಕೆ ಅರ್ಪಿಸಿಕೊಂಡಂತಿದೆ.

ಈ ಹೊತ್ತಿಗೆ ಗೋವಿನ ಸಾತ್ವಿಕತೆ ಮತ್ತು ಹುಲಿಯ ದುಷ್ಟತನಗಳು ತಮ್ಮ ಅರ್ಥವನ್ನು ಕಳೆದುಕೊಳ್ಳುತ್ತವೆ.